ನಾವು ಟ್ಯಾಕ್ಸ್ ಕೊಡಲಿಕ್ಕೆ ಸಿದ್ದವಾಗಿದ್ದೇವೆ. ಏಕೆಂದರೆ ಅವರು ಮೂರು ಆಕ್ಟ್‌ನಲ್ಲಿ ಬರುವಾಗ ಯಾವುದೇ ಮ್ಯಾನಿಷ್ಯೂಲೇಷನ್ ಆಗುವುದಕ್ಕೆ ಸಾಧ್ಯವಿಲ್ಲ. ಫಸ್ಟ್ ಪಾಯಿಂಟ್‌ನಲ್ಲಿ 12.50 ಪರ್ಸೆಂಟ್ ಟ್ಯಾಕ್ಸ್‌ನ್ನು ನಿಮಗೆ ಎನು ಕೊಡಬೇಕಾಗಿದೆಯೋ ಅದನ್ನು ಪೂರ್ತಿಯಾಗಿ ಕೊಡುತ್ತೇವೆ ಎನ್ನುವ ಕಮಿಟ್‌ಮೆಂಟ್ ಇದೆ. ಇದರ ಬಗ್ಗೆ ಸರ್ಕಾರದ ಕ್ರಮ ಏನು?

ಶ್ರೀ ಡಿ.ಬಿ. ಚಂದ್ರೇಗೌಡ: ನಮಗೆ ಸಿಕ್ಕಿದ ಮಾಹಿತಿಯನ್ನು ಅಷ್ಟೇ ನಾನು ತಮಗೆ ಕೊಡಬಲ್ಲೆ. As under VAT, similar to the present sales tax system, tax can be levied only on the considerations received by any dealer on his sales and not on the MRP of the goods sold. VAT cannot be levied at the first point on MRP as requested by the dealers. Any such provision would not stand the test of law. ಅಂತ ನನಗೆ ಬಂದಿರತಕ್ಕಂಥ ಮಾಹಿತಿ. ಆದರೂ ನಿಮ್ಮ ಸಲಹೆಯನ್ನು ನಾನು ಅಧಿಕಾರಿಗಳಿಗೆ ಪಾಸ್‌ಆನ್ ಮಾಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ನನ್ನದೊಂದು ಮನವಿ ಇದೆ. ಬಹುಶಃ ಇದು ಬಹಳ ದಿವಸಗಳ ಹಿಂದೆಯೇ ಆಗಬೇಕಾಗಿತ್ತು. ಕನಿಷ್ಟ ನಮ್ಮ ಶಾಸಕರುಗಳಿಗಾದರೂ ನಿಮ್ಮ ಇಲಾಖೆಯ ಕಮೀಷನರ್ ಕಡೆಯಿಂದ ಅಥವಾ ಬೇರೆ ಯಾರಾದರೂ ಒಬ್ಬ ಅಧಿಕಾರಿಯಿಂದ ನಮ್ಮ ಅನೇಕ ಸಂದೇಹಗಳಿಗೆ ಹೊರಗಡೆಯಾದರೂ ತೋಡಿಕೊಳ್ಳಲು ಒಂದು ದಿವಸ ಒಂದು ಕಾರ್ಯಾಗಾರವನ್ನು ಏರ್ಪಡಿಸುವಂಥಾದ್ದು ಅಗತ್ಯ ಎಂಬುದು ನನ್ನ ಭಾವನೆ. ಬಹುಶಃ ನಮಗೆ ಯಾರಾದರೂ ಹೊರಗಡೆ ಕೇಳಿದರೆ. ನೀವು ಬಿಲ್ ಪಾಸ್ ಮಾಡಿದ್ದೀರಲ್ಲಾ ಏನು ಇದೆ ಆ ಬಿಲ್‌ನಲ್ಲಿ ಅಂತ ಕೇಳಿದರೆ ಹೇಳಲು ಅವರಿಗೆ ಗೊತ್ತಿರಬೇಕಲ್ಲಾ. ನಮ್ಮ ದಡ್ಡತನ ಪ್ರದರ್ಶನ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, ಆಗಬಹುದು. It is a welcome suggestion. I do welcome it.

ಪರ್ಯಾಲೋಚನ ಪ್ರಸ್ತಾವ

ಛೇರ್ಮನ್: ಪ್ರಸ್ತಾವ ಏನೆಂದರೆ: "2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ವಿಧೇಯಕವನ್ನು ಪರ್ಯಾಲೋಚಿಸುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 19ರವರೆಗೆ, ಎರಡೂ ಸೇರಿದಂತೆ.

ಛೇರ್ಮನ್: ಪ್ರಸ್ತಾವ ಏನೆಂದರೆ, "ಖಂಡ 2 ರಿಂದ 19ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 19ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 20ಕ್ಕೆ ತಿದ್ದುಪಡಿ:

ಶ್ರೀ ಡಿ.ಬಿ. ಚಂದ್ರೇಗೌಡ: (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ, ಖಂಡ 20ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ;

ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ವಿಧೇಯಕ, 2003 (2003ರ ವಿಧಾನಸಭೆಯ ವಿಧೇಯಕ ಸಂಖ್ಯೆ: 2) ತಿದ್ದುಪಡಿ.

"1. 20ನೇ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:

20. ರಫ್ತು ಮತ್ತು ಅಂತರ ರಾಜ್ಯ ಮಾರಾಟ ಇತ್ಯಾದಿಗಳ ಮೇಲೆ ಹೂಡುವಳಿ ತೆರಿಗೆಯ ಕಡಿತ:- ಈ ಅಧಿನಿಯಮದ ಅಡಿಯಲ್ಲಿ,"

(ಎ) ಭಾರತದ ಸರಹದ್ದಿನ ಹೊರಗೆ ರಫ್ತು ಕ್ರಮದಲ್ಲಿ ಯಾವುದೇ ಸರಕುಗಳ ಮಾರಾಟದ, ಅಥವಾ

(ಬಿ) ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಗುರಿಯಾಗುವ ಯಾವುದೇ ಸರಕುಗಳ ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯದ ಕ್ರಮದಲ್ಲಿ ಮಾಡಿದ ಮಾರಾಟದ, ಅಥವಾ

(ಸಿ) ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ನಿರ್ದಿಷ್ಟ ಪಡಿಸಿದ ಪ್ರಾಧಿಕಾರಗಳಿಂದ ಪಡೆದ ಅಧಿಕಾರದ ಅಡಿಯಲ್ಲಿ ಸ್ಥಾಪಿತವಾದ ಯಾವುದೇ ವಿಶೇಷ ಆರ್ಥಿಕ ವಲಯದಲ್ಲಿರುವ ಒಂದು ಘಟಕವಾಗಿರುವ ಒಬ್ಬ ವ್ಯಾಪಾರಿಗೆ ಮಾಡಿದ ಯಾವುದೇ ಸರಕುಗಳ ಮಾರಾಟದ, ಅಥವಾ

(ಡಿ) ರಫ್ತು ಆಧಾರಿತ ಘಟಕವಾಗಿರುವ ಒಬ್ಬ ವ್ಯಾಪಾರಿಗೆ ಮಾಡಿದ ಯಾವುದೇ ಸರಕುಗಳ ಮಾರಾಟದ, ಸಂಬಂಧದಲ್ಲಿಯ ಹೂಡುವಳಿಗಳ ಖರೀದಿಯ ಮೇಲೆ ಯಾವೊಬ್ಬ ವ್ಯಾಪಾರಿಯು ಸಂದಾಯ ಮಾಡಿದ ತೆರಿಗೆಯನ್ನು, ಅಂಥ ವ್ಯಾಪಾರಿಯು ಸಂದಾಯ ಮಾಡಬೇಕಾದ ಹುಟ್ಟುವಳಿ ತೆರಿಗೆಯಿಂದ 10ನೇ ಪ್ರಕರಣದಲ್ಲಿಯ ಉಪಬಂಧಗಳಿಗೆ ಅನುಸಾರವಾಗಿ ಕಡಿತಮಾಡತಕ್ಕದ್ದು.

(2) ಒಬ್ಬ ನೋಂದಾಯಿತ ವ್ಯಾಪಾರಿಯು, ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ನಿರ್ದಿಷ್ಟ ಪಡಿಸಿದ ಪ್ರಾಧಿಕಾರಗಳಿಂದ ಪಡೆದ ಅಧಿಕಾರದ ಅಡಿಯಲ್ಲಿ ಸ್ಥಾಪಿತವಾದ ಯಾವುದೇ ವಿಶೇಷ ಆರ್ಥಿಕ ವಲಯದಲ್ಲಿರುವ ಒಂದು ಘಟಕವಾಗಿರುವ ಅಥವಾ ರಫ್ತು ಆಧಾರಿತ ಘಟಕವಾಗಿರುವ ಯಾವೊಬ್ಬ ನೋಂದಾಯಿತ ವ್ಯಾಪಾರಿಗೆ ಯಾವುದೇ ಸರಕುಗಳನ್ನು ಮಾರಾಟ ಮಾಡಿದಾಗ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯಿಂದ ವಿನಾಯಿತಿಗೊಳಿಸತಕ್ಕದ್ದು.

ವಿವರಣೆ 1: ಈ ಪ್ರಕರಣದ ಉದ್ದೇಶಕ್ಕಾಗಿ "ವಿಶೇಷ ಆರ್ಥಿಕ ವಲಯ" ಎಂಬ ಪದಾವಳಿಯು ಕೇಂದ್ರ ಅಬ್ಕಾರಿ ಅಧಿನಿಯಮ, 1944ರ (1944ರ ಕೇಂದ್ರ ಅಧಿನಿಯಮ 1) 3ನೇ ಪ್ರಕರಣದ ಪರಂತುಕದ 2ನೇ ವಿವರಣೆಯ (iii)ನೇ ಖಂಡದಲ್ಲಿ ಅದಕ್ಕೆ ಕೊಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

ವಿವರಣೆ 2: ಈ ಪ್ರಕರಣದ ಉದ್ದೇಶಕ್ಕಾಗಿ "ರಫ್ತು ಆಧಾರಿತ ಘಟಕ" ಎಂದರೆ, ಕೇಂದ್ರ ಸರ್ಕಾರವು ಹಾಗೆಂದು ಪ್ರಮಾಣೀಕರಿಸಿದ ಒಂದು ಘಟಕ.

2. ಒಂದನೇ ಅನುಸೂಚಿಯ ತಿದ್ದುಪಡಿ:- ಒಂದನೇ ಅನುಸೂಚಿಯಲ್ಲಿ, 38ನೇ ಕ್ಲರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳ ತರುವಾಯ, ಈ ಮುಂದಿನವುಗಳನ್ನು ಸೇರಿಸತಕ್ಕದ್ದು, ಎಂದರೆ:

"39. ಬೀರ್, ಫೆನ್ನಿ, ಲಿಕ್ವೇರ್ ಹಾಗೂ ವೈನನ್ನು ಒಳಗೊಂಡಂತೆ ಮದ್ಯ.

40. ರೆಕ್ಟಿಫೈಡ್ ಸ್ಪಿರಿಟ್."

3. ನಾಲ್ಕನೇ ಅನುಸೂಚಿಯ ಪ್ರತಿಯೋಜನೆ: ನಾಲ್ಕನೇ ಅನುಸೂಚಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:

"ನಾಲ್ಕನೇ ಅನುಸೂಚಿ

ಶೇಕಡಾ ಇಪ್ಪತ್ತರ ದರದಲ್ಲಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳು

(4(1)(ಎ) (iii)ನೇ ಪ್ರಕರಣ)

ಕ್ರಮ ಸಂಖ್ಯೆ	ಸರಕುಗಳ ವಿವರ
1	2
1	ನಿದ್ರಾಜನಕಗಳು (ನಾರ್ಕೊಟಿಕ್ಸ್)
2	ಕಾಕಂಬಿ

ಪ್ರಸ್ತಾಪ ಮಂಡಿಸಲ್ಪಟ್ಟಿತು

ಛೇರ್ಮನ್:- ಪ್ರಸ್ತಾಪ ಎನೆಂದರೆ:-

"That for clause , (12) the following shall be substituted, namely:-

``**20. Deduction of unput tax on exports and interstate sales, etc.,:-** (1) Tax paid under this Act by any dealer on purchase of inputs in respect of,-

(a) any goods sold in the course of export out of the territory of India, or

(b) any goods taxable under the Act, sold in the course of interstate trade or commerce, or

(c) any goods sold to a dealer who is a unit located in any special economic zone established under authorisation by the authorities specified by the Centreal Government in this behalf, or

(d) any goods sold to a dealer who is an Export Oriented Unit,

shall be deducted as provided under Section 10, from output tax payable by such dealer.

(2) Goods sold by a registered dealer to any other registered dealer who is a unit located in any special economic zone established under authorisation by the authorities specified by the Central Government in this behalf or who is an Export Oriented Unit, shall be exempt from the tax payable under this Act.

Explanation 1.- For the purposes of this section, the expression ``special economic zone" has the meaning assigned to it in clause (iii) to Explanation 2 to the proviso to section 3 of the Central Excise Act, 1944 (Central Act 1 of 1944).

Explanation 2.- For the purpose of this section, "Export Oriented Unit" means a unit certified as such by the Central Government."

2. Amendment of First Schedule.- In the first schedule, after the entries relating to serial number 38, the following shall be inserted, namely,-

"39. Liquor including Beer, Fenny, Liqueur and Wine

40. Rectified spirit"

3. Substitution of Fourth Schedule.- For the Fourth Schedule, the following shall be substituted, namely:

'FOURTH SCHEDULE

GOODS TAXABLE AT TWENTY PER CENT

[Section 4(1)(a)(iii)]

Serial Number	Description of goods
1	2
1	Narcotics
2	Molasses

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 20 ತಿದ್ದುಪಡಿಯಾದ ರೀತಿಯಲ್ಲಿ

ಛೇರ್ಮನ್: ಪ್ರಸ್ತಾವ ಏನೆಂದರೆ "ಖಂಡ 20, ತಿದ್ದುಪಡಿಯದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 20, ತಿದ್ದುಪಡಿಯಾದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 21ರಿಂದ 90ರವರೆಗೆ, ಎರಡೂ ಸೇರಿದಂತೆ:

ಪ್ರಸ್ತಾವ ಏನೆಂದರೆ:

ಛೇರ್ಮನ್ : "ಖಂಡ 21 ರಿಂದ 90ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 21 ರಿಂದ 90ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

5.50 ಪಿಎಂ

ಖಂಡ 1 ಇತ್ಯಾದಿ:

ಛೇರ್ಮನ್: ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ

ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು)

(ಶ್ರೀ ಎಸ್.ಎಂ.ಕೃಷ್ಣ ಅವರ ಪರವಾಗಿ): ಮಾನ್ಯ ಅಧ್ಯಕ್ಷರೇ, "2003ನೇ ಸಾಲಿನ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಈ ಸಭೆಯು ಅಂಗೀಕರಿಸಬೇಕೆಂದು ಕೋರುತ್ತೇನೆ."

ಛೇರ್ಮನ್: ಪ್ರಸ್ತಾವ ಏನೆಂದರೆ,

"2003ನೇ ಸಾಲಿನ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಈ ಸಭೆಯು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನಿಡಲಾಯಿತು

ಶಾಸನ ರಚನೆ

ಅ. ವಿಧೇಯಕವನ್ನು ಮಂಡಿಸುವುದು.

ii. ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕ, 2003

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು): (ಶ್ರೀ ಎಸ್.ಎಂ. ಕೃಷ್ಣ ಅವರ ಪರವಾಗಿ): ಮಾನ್ಯ ಅಧ್ಯಕ್ಷರೇ, "2003ನೇ ಸಾಲಿನ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಛೇರ್ಮನ್: ಪ್ರಸ್ತಾವ ಏನೆಂದರೆ,

"2003ನೇ ಸಾಲಿನ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೇ, "2003ನೇ ಸಾಲಿನ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಛೇರ್ಮನ್: ಅನುಬಂಧ III ವಿಧೇಯಕವನ್ನು ಮಂಡಿಸಲಾಗಿದೆ.

ಆ. iii. ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ವಿಧೇಯಕ 1996-ಭಾರತದ ರಾಷ್ಟ್ರಪತಿಯವರಿಂದ ಹಿಂದಿರುಗಿಸಿದ್ದರ ಮೇರೆಗೆ ಪುನಃ ಪರ್ಯಾಲೋಚನಾ ಪ್ರಸ್ತಾವ.

ಶ್ರೀ ವಸಂತ ಎ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೇ, 1996ನೇ ಸಾಲಿನ ಕರ್ನಾಟಕ ಒಳನಾಡು ಮೀನುಗಾರಿಗೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ವಿಧೇಯಕವನ್ನು ಭಾರತ ರಾಷ್ಟ್ರಪತಿಯವರಿಂದ ಹಿಂದಿರುಗಿಸಿದ್ದ ಮೇರೆಗೆ .....